ಭ್ರಮಿಸಿ ಭಾಷಣ ಮಾಡಲು ಶುರು ಮಾಡಿದೆ. ಭಾಷಣ ಕೇಳಿ ಸಹಪಾಠಿಗಳು, 'ಇವಳು ಕಂಡಹಾಗೆ ಅಲ್ಲಪ್ಪಾ...' ಅಂತ ಬೆರಗುಗಣ್ಣಿನಿಂದ ನೋಡುವಾಗ ಒಳಗೊಳಗೆ ಪುಳಕ. ಎಲ್ಲರ ಮುಂದೆ ಟೀಚರಿಂದ ತಾರೀಪು ಸಿಗುತ್ತಿತ್ತು. ಮುಂದೆ ಭಾಷಣ ಮಾಡಬೇಕಾದ ಸಂದರ್ಭ ಬಂದಾಗಲೆಲ್ಲಾ ಮಾವನೊಂದಿಗೆ ದುಂಬಾಲು ಬಿದ್ದು ಬರೆಯಿಸಿ ಕೊಳ್ಳುವುದು, ಹೊಳೆ ಬದಿಗೆ ಬಂದು ಉರು ಹೊಡೆಯುವುದು ಮಾಮೂಲಿ ಆಯಿತು. ಹಾಗಾಗಿ, ಎಲಿಮೆಂಟರಿ ಶಾಲೆಯಲ್ಲಿ ನಾ ಒಬ್ಬಳು ಭಾಷಣಕಾರ್ತಿ ಆಗಿಬಿಟ್ಟಿದ್ದೆ. ನಂತರ ಶಾಲೆ ಕಾಲೇಜು ಅಂತ ದೂರ ದೂರದ ಊರಿಗೆ ಹೋಗಿ ಆ ಅಗಾಧ ಸಮುದ್ರದೊಳಗೆ ನಾನು ಅನಾಮಧೇಯಳಾಗಿ ಉಳಿದು ಈ ಭಾಷಣದ ಗೊಂದಲದಿಂದ ದೂರ ಉಳಿದು ಒಂದು ರೀತಿಯ ನೆಮ್ಮದಿಯ ದಿನಗಳನ್ನ ಮರಳಿ ಪಡೆದೆನೆನ್ನಿ.

ಆದರೆ, ಮತ್ತೆ ಇದೆಲ್ಲಾ ತಗಲಿಕೊಂಡದ್ದು ಮದುವೆಯಾಗಿ ಮಕ್ಕಳಾಗಿ ಕವಿತೆಯನ್ನು ಮೈ ಮೇಲೆ ಎಳೆದುಕೊಂಡ ಮೇಲೆ. ಒಂದೆರಡು ಕವಿತೆ ಗೀಚಿ ನಮ್ಮ ಊರಲ್ಲಿ ಚೂರು ಪಾರು ಹೆಸರು ಮಾಡಿದ ಮೇಲೆ ಸ್ವಾಗತಕ್ಕೆ ವಂದನಾರ್ಪಣೆಗೆ ಅಂತ ಹೆಸರು ಆಹ್ವಾನ ಪತ್ರಿಕೆಯಲ್ಲಿ ಅಚ್ಚಾಗಿ, ಅಚ್ಚಾದ ಹೆಸರು ಭಾಷಣಕ್ಕೆ ಕರೆಯುವವರಿಗೆ ನೆಚ್ಚಾಗಿ ಮತ್ತೆ ಎಂದಿನ ನನ್ನ ನಿದ್ರೆಗೆ ಭಂಗ ಬಂದದ್ದು.

ಇವತ್ತು ಶಾಲಾ ವಾರ್ಷಿಕೋತ್ಸವ... ನೀವು ಮುಖ್ಯ ಅತಿಥಿಯಾಗಿ ಬರಬೇಕು, ನಾಡಿದ್ದು ಕವಿಗೋಷ್ಠಿ, ಒಂದು ಆಶಯ ಭಾಷಣ ಮಾಡಬೇಕು, ಮುಂದಿನವಾರ ಕ್ರೀಡೋತ್ಸವ ನೀವು ಅಧ್ಯಕ್ಷರಾಗಬೇಕು... ಹೀಗೆ ಮುಂದುವರಿತನೇ ಹೋಗುತ್ತಿತ್ತು ಪಟ್ಟಿ. ಸಾಹಿತ್ಯ, ಶಾಲಾ ಕಾರ್ಯಕ್ರಮಗಳೆಲ್ಲ ಓಕೆ, ಆದರೆ ಈ ಕ್ರೀಡಾ ಕಾರ್ಯಕ್ರಮಕ್ಕೆಲ್ಲ ಯಾಕೆ ಕರೀತಾರೋ ಗೊತ್ತಾಗುತ್ತಿರಲಿಲ್ಲ. ಮೈದಾನಕ್ಕೆ ಒಂದು ದಿನವೂ ಇಳಿದು ಪ್ರಾಕ್ಟೀಸ್ ಮಾಡಿದವಳಲ್ಲ. ಅಂತಹುದರಲ್ಲಿ ನಾನು ಕ್ರೀಡೆ ಬಗ್ಗೆ ಭಾಷಣ ಬಿಗಿಯಬೇಕು, ಸುಳ್ಳು ಸುಳ್ಳೇ ಉಪದೇಶ ಕೊಡಬೇಕು. ಊರಿನಲ್ಲಿ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ. ಮತ್ತೆ ಅಲ್ಲಿ ಇಲ್ಲಿ ತಡಕಾಡಿ ನಾನು ಉರು ಹೊಡೆಯಬೇಕು. ಸಿವನೇ... ಈ ಕಷ್ಟ ಯಾರಿಗೆ ಹೇಳುವುದು. ನಾವೇನೋ ಬರೀತೇವೆ... ಬರೆದ ಅಷ್ಟನ್ನೂ ಮಾತಾಡುತ್ತೇವೆ

